**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 241/2023

**ಸಾಕ್ಷಿಯನ್ನು ದಿನಾಂಕ 15.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಗುರುದೇವಾರಾಧ್ಯ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ನಂಜುಂಡರಾಧ್ಯ | ಸಿ.ಡಬ್ಲ್ಯೂ-1 |
| ವಯಸ್ಸು | : | 66 | |
| ಉದ್ಯೋಗ | : | ನಿವೃತ ಕೆ.ಎಸ್.ಆರ್.ಟಿ.ಸಿ ನೌಕರ | |
| ವಾಸ ಸ್ಥಳ | : | ವರುಣ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಚಾಸ 7 ನನ್ನ ಹೆಂಡತಿ ಇರುತ್ತಾರೆ. ಚಾಸ 11 ನನ್ನ ಮೊಮ್ಮಗ. ಚಾಸ 12 ಮತ್ತು 14 ನನ್ನ ಮಕ್ಕಳಿರುತ್ತಾರೆ. ಚಾಸ 13 ಮತ್ತು 15 ನನ್ನ ಅಳಿಯಂದಿರು. ಚಾಸ 16 ನನ್ನ ತಂಗಿಯ ಮಗನಿರುತ್ತಾನೆ. ಚಾಸ 17 ರಿಂದ 19 ನನ್ನ ಹೆಂಡತಿಯ ತಮ್ಮಂದಿರು. ಚಾಸ 20 ನನ್ನ ಬಾಮೈದನ ಮಗ. ಚಾಸ 21 ಪುಷ್ಪಲತಾ ನನ್ನ ಬಾಮೈದನ ಮಗಳು.

ಮೃತ ಪಲ್ಲವಿ ನನ್ನ 3 ನೇ ಮಗಳಿರುತ್ತಾಳೆ. ಮೃತ ಪಲ್ಲವಿಯನ್ನು 10 ವರ್ಷಗಳ ಹಿಂದೆ ಲೋಕೇಶ್ ಅರಾಧ್ಯ ಇವರಿಗೆ ಮದುವೆ ಮಾಡಿಕೊಟ್ಟಿದ್ದೆವು. ನ್ಯಾಯಾಲಯದ ಮುಂದಿರುವ ಆರೋಪಿಯೇ ಲೋಕೇಶ್ ಆರಾಧ್ಯ ಇರುತ್ತಾನೆ. ಲೋಕೇಶ್ ಅರಾಧ್ಯ ಮೂಲತಃ ಬೆಂಗಳೂರಿನವರಾಗಿದ್ದು ವರುಣದಲ್ಲಿ ವಾಸವಿದ್ದರು. ಮದುವೆ ಕಾಲಕ್ಕೆ ಮೈಸೂರಿನ ನಜರಬಾದ್ ನಲ್ಲಿ ವಾಸವಿದ್ದರು. ಮದುವೆ ಬಳಿಕ 3 ವರ್ಷ ಲೋಕೇಶ್ ಅರಾಧ್ಯ ಮತ್ತು ನನ್ನ ಮಗಳು ನಜರಬಾದ್ ನಲ್ಲಿ ವಾಸವಿದ್ದರು. ನಂತರ ಅಲ್ಲಿ ಬಾಡಿಗೆ ಕಟ್ಟಲಾಗುವುದಿಲ್ಲವೆಂದು ವರುಣ ಗ್ರಾಮಕ್ಕೆ ಬಂದು ಬಾಡಿಗೆ ಮನೆಯಲ್ಲಿ ವಾಸವಿದ್ದರು. ಚಾಸ 11 ವೈಭವ್ ಆರಾಧ್ಯ ನನ್ನ ಮಗಳಾದ ಪಲ್ಲವಿಯ ಮಗನಿರುತ್ತಾನೆ. ವರುಣದಲ್ಲಿ ಚಾಸ 11 ಜನಿಸಿರುತ್ತಾನೆ. ನಂತರ ನನ್ನ ಮಗಳು ಮತ್ತು ಅಳಿಯ ವರುಣದಿಂದ ಮನೆ ಖಾಲಿ ಮಾಡಿಕೊಂಡು ಮಗುವನ್ನು ಓದಿಸಬೇಕೆಂದು ಮೈಸೂರಿನ ನಾಡನಹಳ್ಳಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯಲ್ಲಿ ವಾಸವಿದ್ದರು. ನನ್ನ ಮಗಳು ಮರಣ ಹೊಂದುವ 3 ತಿಂಗಳು ಮುಂಚಿನಿಂದ ಅವರು ಅಲ್ಲಿ ವಾಸವಿದ್ದರು. ನನ್ನ ಮಗಳು ಹಾಗೂ ಅವಳ ಗಂಡ ಹಣಕಾಸಿನ ವಿಷಯಕ್ಕೆ ಆಗಾಗ ಜಗಳವಾಡುತ್ತಿದ್ದರು. ನನ್ನ ಮಗಳು ಅಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. 2020 ರಲ್ಲಿ ನನ್ನ ಮಗಳ ಗಂಡ ಲೋಕೇಶ್ ಅರಾಧ್ಯ ವರುಣದಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ್ದ, ಮನೆ ಅರ್ಧ ಕಟ್ಟಿದ ಬಳಿಕ ನನ್ನ ಬಳಿ ಹಣವಿಲ್ಲವೆಂದು ಓಡಿ ಹೋಗಿದ್ದ. ಆಗ ನಾನೇ ಆ ಮನೆಯನ್ನು ಪೂರ್ಣಗೊಳಿಸಿ ನನ್ನ ಮಗಳಿಗೆ ನೀಡಿದ್ದೆ. ಆ ಕಾಲಕ್ಕೆ

ನನ್ನ ಅಳಿಯ ಎಲ್ಲಿ ಹೋಗಿದ್ದ ಎಂದು ಗೊತ್ತಿಲ್ಲ. 2 ವರ್ಷಗಳ ಬಳಿಕ ನನ್ನ ಮಗಳ ಗಂಡ ನನ್ನ ಹೆಂಡತಿಯ ಅಣ್ಣ ತಮ್ಮಂದಿರ ಬಳಿ ಬಂದು ನಾನು ಮಾಡಿದ್ದು ತಪ್ಪಾಗಿದೆ, ಇನ್ನು ಮುಂದೆ ಸರಿಯಾಗಿರುತ್ತೇನೆ ರಾಜಿ ಮಾಡಿಸಿಕೊಡಿ ಎಂದು ಕೇಳಿದ್ದ. ಆಗ ನನ್ನ ಹೆಂಡತಿಯ ಅಣ್ಣ ತಮ್ಮಂದಿರು ನನ್ನ ಮಗಳಿಗೆ ಬುದ್ದಿವಾದ ಹೇಳಿ ಗಂಡನ ಜೊತೆ ನಾಡನಹಳ್ಳಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಬಾಡಿಗೆ ಮನೆಗೆ ಕಳುಹಿಸಿದ್ದರು. ಆ ಕಾಲಕ್ಕೆ ನಾನು ನನ್ನ ಅಳಿಯನಿಗೆ ಸ್ವಂತ ಮನೆ ಇದ್ದು ಏಕೆ ಬಾಡಿಗೆ ಮನೆಗೆ ಹೋಗುತ್ತೀರಿ ಎಂದು ಹೇಳಿದಾಗ ಆತ ಒಪ್ಪಲಿಲ್ಲ. ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಮನೆಗೆ ಆರೋಪಿಗೆ ಸಾಲ ನೀಡಿದ್ದ ಜನಗಳು ಬಂದು ಸಾಲ ಕೇಳಲು ಪ್ರಾರಂಭಿಸಿದರು. ಆ ಕಾಲಕ್ಕೆ ಆರೋಪಿ ನನ್ನ ಮಗಳಿಗೆ ತೊಂದರೆ ನೀಡಲು ಪ್ರಾರಂಭಿಸಿದ ಮತ್ತು ಆರೋಪಿ ಮೊಬೈಲಿನಲ್ಲಿ ಗೇಮ್ ಆಡಿ ಸಾಲ ಮಾಡಿಕೊಂಡಿದ್ದ. ಆರೋಪಿ ನನ್ನ ಮಗಳಿಗೆ ಹೊಡೆಯುವುದು ಬಡಿಯುವುದು ಮಾಡುತ್ತಿದ್ದ ಹಾಗೂ ಮನೆಯಲ್ಲಿ ಟಿ.ವಿ ಹಾಗೂ ವಸ್ತುಗಳನ್ನು ಹೊಡೆದು ಹಾಕುತ್ತಿದ್ದ ಮತ್ತು ನನ್ನ ಮಗಳ ನಡತೆ ಸರಿಯಿಲ್ಲವೆಂದು ಹೇಳುತ್ತಿದ್ದ. ಅವಳು ಟೈಲರಿಂಗ್ ಕೆಲಸ ಮಾಡುತ್ತಿದ್ದರಿಂದ ಒಬ್ಬಳೇ ಓಡಾಡುತ್ತಿದ್ದಳು, ಆ ಕಾಲಕ್ಕೆ ಆರೋಪಿ ಅವಳ ನಡತೆ ಸರಿಯಿಲ್ಲವೆಂದು ಹೇಳುತ್ತಿದ್ದ. ಆ ರೀತಿ ತೊಂದರೆ ನೀಡುತ್ತಿದ ಬಗ್ಗೆ ನನ್ನ ಮಗಳು ನನಗೆ ಹೇಳಿದ್ದರಿಂದ ಆಕೆ ಸಾಯುವ 15 ದಿನಗಳ ಮುಂಚೆ ನನ್ನ ಹೆಂಡತಿ ಹಾಗೂ ನನ್ನ ಬಾಮೈದ ಚನ್ನವೀರಣ್ಣರಾಧ್ಯ ಇವರನ್ನು ನನ್ನ ಮಗಳ ಮನೆಗೆ ಕಳುಹಿಸಿದ್ದೆ. ಆಗ ಅವರು

ಆರೋಪಿಗೆ ಬುದ್ದಿ ಹೇಳಿದ್ದರು ಹಾಗೂ ಅವರ ಮನೆಯ ಬಾಡಿಗೆ ಹಣವನ್ನು ಕಟ್ಟಿ ಬಂದಿದ್ದರು. ಆ ರೀತಿ ಹೋಗಿ ಬಂದ 15 ದಿನಗಳ ನಂತರ ಒಂದು ದಿನ ಆರೋಪಿಯು ಬೆಳಿಗ್ಗೆ 6 ಗಂಟೆಗೆ ನನ್ನ ಹೆಂಡತಿಯ ಅಣ್ಣ ಕುಮಾರ್ ಆರಾಧ್ಯ ಇವರಿಗೆ ಫೋನ್ ಮಾಡಿ ನಾನು ಪಲ್ಲವಿಯನ್ನು ಕೊಲೆ ಮಾಡಿರುತ್ತೇನೆ ಎಂದು ಹೇಳಿದ್ದನು. ಕುಮಾರ್ ಆರಾಧ್ಯ ಇವರು ಅವರ ತಮ್ಮ ಚನ್ನವೀರಣ್ಣಆರಾಧ್ಯ ಇವರಿಗೆ ವಿಷಯ ತಿಳಿಸಿದರು. ಆಗ ಚನ್ನವೀರಣ್ಣಆರಾಧ್ಯ ಇವರು ನನ್ನ 2 ನೇ ಮಗಳು ಹೇಮಲತಾಗೆ ಫೋನ್ ಮಾಡಿ ವಿಷಯ ತಿಳಿಸಿದರು. ನಂತರ ಹೇಮಲತಾ ನನ್ನ ಹೆಂಡತಿಗೆ ಫೋನ್ ಮಾಡಿ ವಿಷಯ ತಿಳಿಸಿದಾಗ ಆ ಬಗ್ಗೆ ನನಗೆ ಗೊತ್ತಾಯಿತು. ಆ ಕಾಲಕ್ಕೆ ನಾನು, ನನ್ನ ಹೆಂಡತಿ, ನಾಗಭೂಷಣರಾಧ್ಯ, ಚನ್ನವೀರಣ್ಣಆರಾಧ್ಯ ಮತ್ತು ನನ್ನ ಮಗಳು ಹೇಮಲತಾ ಸೇರಿ ಬೆಳಿಗ್ಗೆ 8.30 ಗಂಟೆಗೆ ಕೆ.ಎಸ್.ಆರ್.ಟಿ.ಸಿ ಬಡಾವಣೆಯ ಆರೋಪಿತನ ಮನೆಗೆ ಬಂದು ನೋಡಿದೆವು. ನಾವು ಬಂದಾಗ ಮನೆಯ ಬಾಗಿಲು ಮುಚ್ಚಿತ್ತು, ಬೀಗ ಹಾಕಿರಲಿಲ್ಲ. ನಾವು ಬಾಗಿಲನ್ನು ತಳ್ಳಿ ಒಳಗೆ ಹೋದೆವು. ಆ ಕಾಲಕ್ಕೆ ನನ್ನ ಮಗಳು ಅಂಗಾತ ಬಿದ್ದಿದ್ದಳು. ಅವಳ ಮೈಮೇಲೆ ಒಂದು ಟಾಪ್ ಮತ್ತು ಪ್ಯಾಂಟ್ ಇತ್ತು. ಹಾಸಿಗೆ ಮೇಲೆ ಒಂದು ದಿಂಬು ಮತ್ತು ಒಂದು ಟಾಪ್ ಇತ್ತು. ನಾವು ನೋಡಿದಾಗ ಮುಖದ ಮೇಲೆ ಉಗುರಿನ ಗುರುತು ಇತ್ತು, ಕುತ್ತಿಗೆಯಲ್ಲಿ ಉಗುರಿನ ಗುರುತು ಹಾಗೂ ರಕ್ತದ ಕಲೆಗಳು ಇದ್ದವು. ನಾವು ನೋಡಿದಾಗ ನನ್ನ ಮಗಳು ಮರಣ ಹೊಂದಿದ್ದಳು. ಆ ಕೂಡಲೇ ಮನೆ ಮಾಲೀಕರು ಪೋಲಿಸರಿಗೆ ಫೋನ್

ಮಾಡಿದ್ದರು ಮತ್ತು ಪೋಲಿಸರು ಅಲ್ಲಿಗೆ ಬಂದರು. ಪೋಲಿಸರು ಬಂದ ಬಳಿಕ ನಾನು ದೂರು ನೀಡಿರುತ್ತೇನೆ. ನನ್ನ ತಂಗಿಯ ಮಗ ರಘು ಆರಾಧ್ಯ ಆ ದೂರನ್ನು ಬರೆದರು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಆಲನಹಳ್ಳಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ1 ಎಂದು, ಸಹಿಯನ್ನು ನಿಪಿ1 ಎ ಎಂದು ಗುರುತಿಸಿದೆ. ದೂರಿನಲ್ಲಿರುವ ವಿಷಯಗಳನ್ನು ನಾನು ಮತ್ತು ನನ್ನ ಸ್ನೇಹಿತ ಹೇಳಿ ಬರೆಸಿರುತ್ತೇವೆ. ಅದನ್ನು ಓದಿದ ಬಳಿಕ ನಾನು ಸಹಿ ಮಾಡಿರುತ್ತೇನೆ.

ಈ ವೇಳೆಗೆ ಊಟದ ಸಮಯವಾದ್ದರಿಂದ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು

**S.C. No.** 241/2023

**ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 15.10.2025 ರಂದು ಮದ್ಯಾಹ್ನ ಪುನಃ ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಆ ದಿನ ನಾವು ನಮ್ಮ ಮಗಳ ಮನೆಗೆ ಹೋದಾಗ ಆರೋಪಿತ ತನ್ನ ಮಗನೊಂದಿಗೆ ಮನೆ ಮುಂದಿನ ರಸ್ತೆಯಲ್ಲಿ ನಿಂತಿದ್ದ. ನಾವು ಮನೆ ಒಳಗಡೆ ಹೋಗಿ ನಮ್ಮ ಮಗಳು ಸತ್ತಿರುವುದನ್ನು ನೋಡಿ ಅಳುತ್ತಿರುವಾಗ ಅದನ್ನು ಕೇಳಿ ಆರೋಪಿತ ತನ್ನ ಮಗನಿಗೆ ಬಿಸ್ಕಟ್ ಅಥವಾ ಏನನ್ನೋ ತಿನ್ನಲು ಕೊಡಿಸಿ ರಸ್ತೆಯಲ್ಲಿ ಬಿಟ್ಟು ಓಡಿ ಹೋಗಿದ್ದ.

ದೂರು ನೀಡಿದ ಬಳಿಕ ಪೋಲಿಸರು ಘಟನ ಸ್ಥಳಕ್ಕೆ ಬಂದು ಮಹಜರ್ ಮಾಡಿ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಆ ಕಾಲಕ್ಕೆ ಸ್ಥಳದಲ್ಲಿದ್ದ ದಿಂಬು, ಬ್ಲಾಂಕೆಟ್, ನನ್ನ ಮಗಳ ಟಾಪನ್ನು ಅಮಾನತ್ತುಪಡಿಸಿಕೊಂಡರು. ನನ್ನ ಮಗಳ ಶವವನ್ನು ಆ ಸ್ಥಳದಲ್ಲಿದ್ದ ಬೆಡ್‌ಶೀಟ್ ಮತ್ತು ಟಾಪ್‌ನಿಂದ ಸುತ್ತಿಕೊಂಡು ತೆಗೆದುಕೊಂಡು ಹೋದರು. ಮಹಜರ್ ಮಾಡಿದಾಗ ಮದ್ಯಾಹ್ನ 12 ರಿಂದ 12.30

ಗಂಟೆಯಾಗಿತ್ತು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ2 ಎಂದು, ಸಹಿಯನ್ನು ನಿಪಿ2 ಎ ಎಂದು ಗುರುತಿಸಿದೆ. ಮಹಜರಿಗೆ ಬೇರೆಯವರು ಸಹಿ ಮಾಡಿದ್ದರು, ಈಗ ಅವರ ಹೆಸರು ನೆನಪಿಲ್ಲ. ಈಗ ನಾನು ನೋಡುತ್ತಿರುವ ಪೋಟೊ ಮಹಜರ್ ಕಾಲಕ್ಕೆ ಮನೆಯಲ್ಲಿ ತೆಗೆದ ಪೋಟೋ ಇದೆ. ಆ ಪೋಟೋದಲ್ಲಿ ಮನೆ ಮಾಲೀಕನ ಮಗ ಹಾಗೂ ಇನ್ನೊಬ್ಬ ಕಲಂದರ್ ಎಂಬುವವರು ಇದ್ದಾರೆ. ಸದರಿ ಪೋಟೋವನ್ನು ನಿಪಿ3 ಎಂದು ಗುರುತಿಸಿದೆ. ನಿಪಿ3 ರಲ್ಲಿ ಕಾಣುವ ಶವ ನನ್ನ ಮಗಳದ್ದು ಇದೆ. ಈಗ ನಾನು ನೋಡುತ್ತಿರುವ ಬ್ಲಾಂಕೆಟ್, ದಿಂಬು ಮತ್ತು ಟಾಪ್ ಆ ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡ ವಸ್ತುಗಳಿವೆ. ಸದರಿ ವಸ್ತುಗಳನ್ನು ಎಂಓ 1 ರಿಂದ 3 ಎಂದು ಗುರುತಿಸಿದೆ. (ಎಂಓ 1 ರಿಂದ 3 ನ್ನು ಸೀಲ್ ಮಾಡಿದ ಕವರಿನಿಂದ ತೆಗೆದು ಗುರುತಿಸಲಾಗಿದೆ) ಈಗ ನಾನು ನೋಡುತ್ತಿರುವ ಇನ್ನೆರೆಡು ಬೆಡ್‌ಶೀಟುಗಳು ಶವವನ್ನು ಸುತ್ತಿಕೊಂಡು ಹೋಗಿದ್ದ ಬೆಡ್‌ಶೀಟುಗಳಿವೆ. ಅವುಗಳನ್ನು ಎಂಓ 4 ಮತ್ತು 5 ಎಂದು ಗುರುತಿಸಿದೆ. (ಎಂಓ 4 ಮತ್ತು 5 ನ್ನು ಸೀಲ್ ಮಾಡಿದ ಕವರಿನಿಂದ ತೆಗೆದು ಗುರುತಿಸಲಾಗಿದೆ)

ಪಾಟೀ ಸವಾಲುಃ ಆರೋಪಿ ಪರ ವಕೀಲರು ಚಾಸ 1, 7, 12 ರಿಂದ 15 ನ್ನು ಒಂದೇ ಬಾರಿಗೆ ಪಾಟೀ ಸವಾಲು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು